ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೪೧೦

ಸದಸ್ಯರು ಹೆಸರು : ಶ್ರೀ ಅಲ್ಲೋಡ್ ಹನುಮಂತಪ್ಪ. ವೈ.(ದೇವದುರ್ಗ)

ಉತ್ತರಿಸುವವರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ದೇವದುರ್ಗ ತಾಲ್ಲೂಕಿಗೆ ಕಳೆದ ೩ ವರ್ಷಗಳಿಂದ ಈವರೆಗೂ ಅರಣ್ಯ ಇಲಾಖೆಗೆ ಯಾವ ಯಾವ ಯೋಜನೆಯ ಅಡಿಯಲ್ಲಿ ಯಾವ ಯಾವ ಉದ್ದೇಶಗಳಿಗಾಗಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಖರ್ಚು ಮಾಡಲಾದ ಹಣವೆಷ್ಟು:

ಉತ್ತರ

ಅ) ದೇವದುರ್ಗ ತಾಲ್ಲೂಕಿನಲ್ಲಿ ಅರಣ್ಯೀಕರಣಕ್ಕಾಗಿ ಕಳೆದ ೩ ವರ್ಷಗಳಲ್ಲಿ (೨೦೦೧-೦೨, ೨೦೦೨-೦೩, ೨೦೦೩-೦೪ ರವರೆಗೂ) ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಿದ ಹಾಗೂ ಖರ್ಚು ಭರಿಸಿದ ಅನುದಾನದ ವಿವರಗಳು ಈ ರೀತಿಯಂತಿದೆ:

ಕ್ರ. ಸಂ.	ವಲಯ	ಅನುದಾನ (ಲಕ್ಷ ರೂ.) ಬಿಡುಗಡೆ	ಖರ್ಚು
೧.	ದೇವದುರ್ಗ ರಾಯಚೂರು ಪ್ರಾದೇಶಿಕ	೪೩.೩೯೩	೪೩.೩೯೩
೨.	ದೇವದುರ್ಗ ಸಾಮಾಜಿಕ ಅರಣ್ಯ	೫೬.೩೧೮	೫೬.೩೧೮
	ಒಟ್ಟು	೯೯.೭೧೧	೯೯.೭೧೧

ಯೋಜನೆವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಕರಿಸಲಾಗಿದೆ.

ಕ್ರ.ಸಂ.	ಪ್ರಶ್ನೆ
ಅ)	ಹೊಸದಾಗಿ ಅರಣ್ಯ ಬೆಳೆಸಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳಾವುವು. ಈ ಕಾರ್ಯಕ್ರಮಗಳಿಗೆ ಮಂಜೂರಾದ, ಖರ್ಚಾದ ಹಾಗೂ ಉಳಿದ ಹಣವೆಷ್ಟು (ವರ್ಷವಾರು ಮಾಹಿತಿ ನೀಡುವುದು):
	ಉತ್ತರ
ಅ)	ಹೊಸದಾಗಿ ಅರಣ್ಯ ಬೆಳೆಸಲು, ಕರ್ನಾಟಕ ಸಸ್ಟೈನಬಲ್ ಫಾರೆಸ್ಟ್ ಮ್ಯಾನೇಜ್‌ಮೆಂಟ್ ಮತ್ತು ಬಯೋ-ಡೈವರ್ಸಿಟಿ ಕನ್ಸರವೇಷನ್ ಯೋಜನೆ ಅಡಿಯಲ್ಲಿ ಕಿರು ಜಲಾನಯನ ಅಭಿವೃದ್ಧಿ ಆಧಾರದ ಮೇರೆಗೆ ಸ್ಥಳೀಯ ಜನರ ಸಹಭಾಗಿತ್ವದಲ್ಲಿ ಅರಣ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಯಾವುದೇ ಅನುದಾನವು ಬಿಡುಗಡೆಯಾಗಿರುವುದಿಲ್ಲ.
ಕ್ರ.ಸಂ.	ಪ್ರಶ್ನೆ
ಇ)	ಇದರಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:
	ಉತ್ತರ
	ಯಾವುದೇ ಭ್ರಷ್ಟಾಚಾರ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಕ್ರ.ಸಂ.	ಪ್ರಶ್ನೆ
ಈ)	ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?
	ಉತ್ತರ
	ಪ್ರಶ್ನೆ ಉದ್ಭವಿಸುವುದಿಲ್ಲ.

ವಿಧಾನ ಸಭಾ ಪ್ರಶ್ನೆ ಸಂಖ್ಯೆ ೩೮೧೦ಕ್ಕೆ ಅನುಬಂಧ

ದೇವದುರ್ಗ ತಾಲ್ಲೂಕಿನ ಕಳೆದ ೩ ವರ್ಷಗಳ ಅರಣ್ಯೀಕರಣ ಯೋಜನೆಗಳ ವಿವರ

ಕ್ರ. ಸಂ.	ವರ್ಷ	ನೆಡುತೋಪು (ಹೆಕ್ಟೇರ್)	ನೆಡುತೋಪು ಸಂಖ್ಯೆ (ಲಕ್ಷಗಳಲ್ಲಿ)	ಸಾರ್ವಜನಿಕರಿಗೆ ವಿತರಿಸಲಾದ ಸಸಿಗಳ ಸಂಖ್ಯೆ (ಲಕ್ಷಗಳಲ್ಲಿ)	ಚಾಲ್ತಿಯ ನೆಡು ತೋಪುಗಳ ನಿರ್ವಹಣೆ (ಹೆಕ್ಟೇರ್)	ಮುಂಗಡ ಕಾಮಗಾರಿ (ಹೆಕ್ಟೇರ್)	ಅನುದಾನ (ಲಕ್ಷ ರೂ.)	
							ಬಿಡುಗಡೆ	ಖರ್ಚು
1	2001-02							
	ಸಾಮಾಜಿಕ ಅರಣ್ಯ ವಲಯ	178.0	0.284	1.30	765.0	293.0	17.589	17.589
	ಪ್ರಾದೇಶಿಕ ಅರಣ್ಯ ವಲಯ	79.0	0.796	0.45	190.5	52.0	18.035	18.035
	ಒಟ್ಟು	**257.0**	**1.08**	**1.75**	**955.5**	**345.0**	**35.624**	**35.624**
2.	2002-03							
	ಸಾಮಾಜಿಕ ಅರಣ್ಯ ವಲಯ	377.5	1.935	1.07	489.0		9.929	9.929
	ಪ್ರಾದೇಶಿಕ ಅರಣ್ಯ ವಲಯ	55.8	0.650	0.45	79.0		13.858	13.858
	ಒಟ್ಟು	433.3	2.585	1.52	568.0		23.787	23.787
3	2003-04							
	ಸಾಮಾಜಿಕ ಅರಣ್ಯ ವಲಯ	161.5	0.674	4.95	673.5		28.8	28.8
	ಪ್ರಾದೇಶಿಕ ಅರಣ್ಯ ವಲಯ	28.0	0.105	0.30	280.5		11.5	11.5
	ಒಟ್ಟು	**189.5**	**0.779**	**5.25**	**954.0**		**40.3**	**40.3**
							99.7	**99.7**

ಶ್ರೀ ವೈ.ಅಲ್ಲೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಹಾಗೂ ಎರಡನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಯೋಜನೆಗಳ ಬಗ್ಗೆ ಮಾನ್ಯ ಸಚಿವರು ವಿವರವಾದ ಮಾಹಿತಿಗಳನ್ನು ಒದಗಿಸಿಕೊಟ್ಟಿಲ್ಲವೆಂದು ತಮ್ಮ ಮೂಲಕ ಕೇಳಬಯಸುತ್ತೇನೆ ಮತ್ತು ಯಾವ್ಯಾವ ಯೋಜನೆಗಳಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ? ಎಲ್ಲೆಲ್ಲಿ ಸಸಿಗಳನ್ನು ನೆಡಲಾಗಿದೆ? ಎಂಬ ಪ್ರಶ್ನೆ ಕೇಳಿದ ನಂತರ ಎರಡನೆಯ ಪ್ರಶ್ನೆ ಕೇಳುವುದಕ್ಕೆ ತಾವು ಅನುಮತಿ ನೀಡಬೇಕೆಂದು ತಮ್ಮನ್ನು ಕೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ನಾನು ಈಗಾಗಲೇ ಉತ್ತರಗಳನ್ನು ಒದಗಿಸಿಕೊಟ್ಟಿದ್ದೇನೆ. ಯಾವ್ಯಾವ ಯೋಜನೆಗಳಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ಎಂಬ ವಿವರಗಳನ್ನು ಕೊಟ್ಟಿದ್ದೇನೆ. ಇನ್ನೊಂದು ಪ್ರಶ್ನೆ ಹೊಸದಾಗಿ ಅರಣ್ಯ ಬೆಳೆಸಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳಾವುವು? ಎಂದು ಕೇಳಿರುವುದಕ್ಕೆ ಇದಕ್ಕೋಸ್ಕರ ಯೋಜನೆಯೊಂದನ್ನು ಹಮ್ಮಿಕೊಂಡಿದ್ದು, ಜೆಬಿಎಸ್‌ನಲ್ಲಿ ಹೊಸ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದು ಮುಂದೆ ಬರುವುದರಿಂದ ಮಾಡುತ್ತೇವೆಂದು ತಿಳಿಸಿದ್ದೇವೆ ಮತ್ತು ಇದರಲ್ಲಿ ಎಷ್ಟು ಹಣ ಖರ್ಚಾಗಿದೆ? ಎಂಬ ವಿವರಗಳನ್ನು ಕೇಳಿರುವುದಕ್ಕೆ ಒದಗಿಸಿಕೊಟ್ಟಿದ್ದೇವೆ. ಬೇರೆ ಪ್ರಶ್ನೆ ಏನೂ ಕೇಳಿಲ್ಲ. ಜೆಬಿಎಸ್ ಯೋಜನೆ ಬಗ್ಗೆ ತಮಗೆ ಅಂಕಿ-ಅಂಶಗಳನ್ನು ಕಳುಹಿಸಿಕೊಟ್ಟಿದ್ದೇವೆ. ಸದರಿ ಮಾಹಿತಿ ನಿಮಗೆ ಬಂದಿಲ್ಲವೆಂದರೆ ಈಗ ಕಳುಹಿಸಿಕೊಡುತ್ತಿದ್ದೇನೆ. ತಾವು ಅದರ ಮಾಹಿತಿ ನೋಡಿಕೊಳ್ಳಬಹುದು.

ಶ್ರೀ ವೈ.ಅಲ್ಲೋಡ್ ಹನುಮಂತಪ್ಪ: ನನಗೆ ಯೋಜನೆಗಳ ಕುರಿತಂತೆ ವಿವರವಾದ ಮಾಹಿತಿ ಬಂದಿರಲಿಲ್ಲ. ಈಗ ಆ ಕುರಿತಂತೆ ವಿವರವಾದ ಮಾಹಿತಿ ಕಳುಹಿಸಿಕೊಡುವುದಾದರೆ ನೋಡುತ್ತೇನೆ. ಖರ್ಚು ಮಾಡಿರುವಂಥ ಹಣ ಕುರಿತಂತೆ ಪ್ರಶ್ನೆ ಕೇಳಿದ್ದರೆ ನೀಡಿರುವ ಉತ್ತರ ನನಗೆ ತಿಳಿಯುತ್ತಿಲ್ಲ, ಇನ್ನು ಕೇಳಿರುವ ಎರಡನೆಯ ಪ್ರಶ್ನೆಗೂ ಒದಗಿಸಿರುವ ಉತ್ತರವೇನೆಂದು ನನಗೆ ತಿಳಿಯುತ್ತಿಲ್ಲ. ಅವರು ಏನು ಹೇಳಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಉತ್ತರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಮೂರನೆಯ ಪ್ರಶ್ನೆಗೆ ಸಂಬಂಧಿಸಿದಂತೆ, 'ಯಾವುದೇ ಭ್ರಷ್ಟಾಚಾರ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ'ವೆಂದು ತಿಳಿಸಿದ್ದಾರೆ. ಈ ಬಗ್ಗೆ ನಾನು ಸಾಕಷ್ಟು ಸಲ ಇಲಾಖೆಯ ಮುಖ್ಯಸ್ಥರನ್ನು ಕಂಡು ಭೇಟಿಯಾಗಿ ಬಂದಿರುತ್ತೇನೆ. ಮತ್ತು ದುಡ್ಡು ಖರ್ಚು ಮಾಡಲಾಗಿದೆ ಎಂಬ ಮಾಹಿತಿಯನ್ನು ನನಗೆ ಒದಗಿಸಿಕೊಟ್ಟಿದ್ದೀರಿ. ಇದನ್ನು ನೀವು ಮಾಡಿಲ್ಲವೆಂದು ತಿಳಿಸಿದ್ದೀರಿ. ಅನಂತರ, ನನ್ನ ಮತಕ್ಷೇತ್ರದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಅಲ್ಲಿ ಕಡಿ ಮಾಡುತ್ತಾರೆ, ಜಲ್ಲಿಗಳನ್ನು ಕಡಿಯುತ್ತಾರೆ. ಇಲಾಖೆಯವರು ಯಾವ ನಿಯಮಾನುಸಾರ ಅಲ್ಲಿ ಗಣಿಗಾರಿಕೆ

ನಡೆಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ? ಅರಣ್ಯ ಇಲಾಖೆಯವರನ್ನು ಹೇಳದೆ ಕೇಳದೆ ಅಲ್ಲಿ ಗಣಿಗಾರಿಕೆ ನಡೆಯುತ್ತಿದೆಯೇ? ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಎಂದು ಹೇಳಲೂ ತಯಾರಿಲ್ಲ. ಇದೆಲ್ಲಾ ನಡೆದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದೊಂದು ದೊಡ್ಡ ರೀತಿಯಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಹೇಳುತ್ತಿದ್ದೇನೆ. ಬೇಕಿದ್ದರೆ, ತಾವು ಯಾರನ್ನಾದರೂ ಕಳುಹಿಸಿಕೊಟ್ಟರೆ, ಅಲ್ಲಿ ಏನು ನಡೆದಿದೆ ಎಂಬುದು ಗೊತ್ತಾಗುತ್ತದೆ. ಮತ್ತು ಕಾರ್ಯಕ್ರಮಗಳಿಗೆ ಮಂಜೂರಾದ, ಖರ್ಚಾದ ಹಾಗೂ ಉಳಿದ ಹಣವೆಷ್ಟು? ಎಂದು ಕೇಳಿರುವುದಕ್ಕೆ ಉತ್ತರಿಸಿರುವುದಿಲ್ಲ. ಸಸಿಗಳನ್ನು ನೆಡಲಾಗಿದೆಯೇ? ಬೆಳೆಸಲಾಗಿದೆಯೇ? ಎಂದು ಕೇಳಿರುವುದಕ್ಕೂ ಹೇಳಿಲ್ಲ. ಆದರೆ, ದುಡ್ಡು ಖರ್ಚು ಮಾಡಿದ್ದೇವೆಂದು ಮಾತ್ರ ಹೇಳಿದ್ದಾರೆ. ಯಾವ್ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೇಳಿರುವುದಕ್ಕೆ ವಿವರವಾದ ಮಾಹಿತಿಗಳನ್ನು ನನಗೆ ಒದಗಿಸಿಕೊಟ್ಟಿಲ್ಲ. ಆದುದರಿಂದ, ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುವುದೇನೆಂದರೆ, ಎಲ್ಲೆಲ್ಲಿ ಸಸಿಗಳನ್ನು ನೆಡಿಸಿದ್ದೀರಿ? ಯಾವ್ಯಾವ ಸಸಿಗಳನ್ನು ನೆಡಿಸಿದ್ದೀರಿ? ಎನ್ನುವ ವಿವರವಾದ ಮಾಹಿತಿಗಳನ್ನು ಒದಗಿಸಿಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಅಧ್ಯಕ್ಷರೇ, ಈಗ ಅವರಿಗೆ ಡೀಟೆಲ್ಸ್ ಕಳುಹಿಸಿಕೊಟ್ಟಿದ್ದೇವೆ. ಆದರೂ ಕೂಡ ಅವರು ಕೇಳಿದ್ದಾರೆ. ಹೊಸದಾಗಿ ಅರಣ್ಯ ಬೆಳೆಸಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳಾವುವು? ಈ ಕಾರ್ಯಕ್ರಮಗಳಿಗೆ ಮಂಜೂರಾದ, ಖರ್ಚಾದ ಹಾಗೂ ಉಳಿದ ಹಣವೆಷ್ಟು? ಎಂದು ಕೇಳಿರುವುದಕ್ಕೆ ಉತ್ತರಿಸುವುದಾದರೆ, ಈಗ ಹೊಸದಾಗಿ ಕಾರ್ಯಕ್ರಮಗಳನ್ನು ಜೆಬಿಎಸ್‌ಯಲ್ಲಿ ತೆಗೆದುಕೊಳ್ಳುತ್ತಿದ್ದೇವೆ, ಇನ್ನೂ ತೆಗೆದುಕೊಂಡಿಲ್ಲ. ಮುಂದೆ ಆ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಮತ್ತು ಮೂರನೆಯದಾಗಿ, 'ಇದರಲ್ಲಿ ಭಾರೀ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?' ಎಂದು ಕೇಳಿರುವುದಕ್ಕೆ ಇನ್ನೂ ಕೆಲಸ ಶುರುವಾಗಿಲ್ಲ, ಇನ್ನು ಭ್ರಷ್ಟಾಚಾರ ಎಲ್ಲಿಂದ ಬಂತು? ಒಂದು ವೇಳೆ ಭ್ರಷ್ಟಾಚಾರದ ಯಾವುದಾದರೂ ಪ್ರಕರಣಗಳು ಅವರ ಗಮನಕ್ಕೆ ಬಂದಿದ್ದರೆ, ನನಗೆ ಕೊಡಲಿ. ನಾನು ಅದರ ಬಗ್ಗೆ ಖಂಡಿತವಾಗಿಯೂ ಶಿಸ್ತಿನ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವೈ.ಎಲ್ಕೋಡ್ ಹನುಮಂತಪ್ಪ: ಅಧ್ಯಕ್ಷರೇ, ಸಾಮಾಜಿಕ ಅರಣ್ಯ ವಲಯ ಮತ್ತು ಪ್ರಾದೇಶಿಕ ಅರಣ್ಯ ವಲಯಗಳಲ್ಲಿ ದುಡ್ಡು ಖರ್ಚಾಗಿರುವ ಬಗ್ಗೆ ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರು ಯೋಜನೆಗಳ ಬಗ್ಗೆ ಹೇಳಬೇಕು.

ಇದನ್ನು ತಮಗೆ ಕಳುಹಿಸಿಕೊಡುತ್ತೇನೆ, ನೋಡಬೇಕು. ಸಚಿವರು ಒದಗಿಸಿರುವ ಮಾಹಿತಿಯಲ್ಲಿ ಯೋಜನೆಗಳೇನಾದರೂ ಇವೆಯೇ? ಯೋಜನೆಗಳೆಂದರೆ ಏನೆಂದು

ನಮಗೆ ಅರ್ಥವಾಗಿಲ್ಲ ಯೋಜನೆಗಳಿಂದರೆ ಸಾಮಾಜಿಕ ಅರಣ್ಯ ವಲಯವೆಂದು ಹೇಳುತ್ತೀರಾ?

ಅಧ್ಯಕ್ಷರು : ತಾವು ಮಾನ್ಯ ಸಚಿವರ ಹತ್ತಿರ ಕುಳಿತುಕೊಂಡು ಮಾತನಾಡುವ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾವು ಈಗಾಗಲೇ ಯೋಜನೆ ಬಗ್ಗೆ ಅವರಿಗೆ ಹೇಳಿದ್ದೇನೆ. ಅದು ಅವರಿಗೆ ತಿಳಿದಿಲ್ಲ, ಒಂದೇ ಒಂದು ಯೋಜನೆ ಬರುತ್ತಿದೆ. ಜೆಬಿಎಸ್ ಬರುತ್ತಿದೆ. ಅದು ಜಪಾನ್ ಸ್ಕೀಮ್. ಅದಿನ್ನೂ ಬಂದಿಲ್ಲ, ಆ ಯೋಜನೆ ಬಂದಾಗ ಹಮ್ಮಿಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಅಲ್ಕೋಡ್ ಹನುಮಂತಪ್ಪನವರೆ, ದಯಮಾಡಿ ನೀವು ಅವರೊಂದಿಗೆ ಮಾತನಾಡಿ. ಯೋಜನೆ ಇನ್ನೂ ಬಂದಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನೀವು ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಅಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರ ಸ್ಪಷ್ಟವಾಗಿಲ್ಲ, ಕೇಳುವುದು ಬೇಡವೆಂದರೆ ತೊಂದರೆ ಏನಿಲ್ಲ, ನಾನು ಹಾಗೇ ಹೊರಟುಹೋಗುತ್ತೇನೆ. ಸದಸ್ಯರು ಸ್ಪಷ್ಟವಾದ ಉತ್ತರ ಕೇಳುವುದಕ್ಕೆಂದೇ ಈ ಸದನ ಇರುವುದು. ಈ ಸದನ ಇರುವುದು ಸಚಿವರು ಕೊಡುವ ಉತ್ತರ ನೋಡಿಕೊಂಡು ಮನೆಗೆ ಹೋಗುವುದಕ್ಕಲ್ಲ, ಇಲ್ಲಿ ಯೋಜನೆ ಬಗ್ಗೆ ಕೇಳಿದರೆ ಅರಣ್ಯ ವಲಯದ ಬಗ್ಗೆ ಹೇಳುತ್ತಾರೆ. ಸಾಮಾಜಿಕ ಅರಣ್ಯ ವಲಯಕ್ಕೆ ಇಷ್ಟು ದುಡ್ಡು ಕೊಟ್ಟಿದ್ದೇವೆ, ರೆಗ್ಯುಲರ್ ಫಾರೆಸ್ಟ್‌ಗೆ ಇಷ್ಟು ದುಡ್ಡು ಕೊಟ್ಟಿದ್ದೇವೆಂದರೆ ನಾನೇನು ಹೇಳಬೇಕು? ಇದ್ಯಾವ ಉತ್ತರ? ಇದಕ್ಕೆ ಯೋಜನೆ ಎಂದು ಹೇಳುತ್ತೀರಾ? ನಾನು ಯೋಜನೆ ಬಗ್ಗೆ ಕೇಳಿದ್ದೇನೆ. ಬೇಡವೆಂದರೆ, ನನ್ನ ಪಾಡಿಗೆ ನಾನು ಹೊರಟು ಹೋಗುತ್ತೇನೆ. ಇಲ್ಲದಿದ್ದರೆ, ಸುಮ್ಮನೆ ಕುಳಿತುಕೊಂಡು ಬಿಡುತ್ತೇನೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಆ ಪ್ರಶ್ನೆಯಲ್ಲ ಸದಸ್ಯರ ಬಯಕೆ ಏನಿರುತ್ತದೆಂದರೆ, ಯೋಜನೆಗಳ ಬಗ್ಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು: ದಯಮಾಡಿ ಉತ್ತರ ಹೇಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಯೋಜನೆ ಎಂದರೆ, ಸಾಮಾಜಿಕ ಅರಣ್ಯ ವಲಯದಲ್ಲಿ ಎಷ್ಟು ಬರುತ್ತದೆ, ಮತ್ತು ರೆಗ್ಯುಲರ್ ಅರಣ್ಯ ವಲಯದಲ್ಲಿ ಎಷ್ಟು ಬರುತ್ತದೆಂದು ಡೀಟೆಲ್ಸ್ ಕೊಟ್ಟು ಹೇಳಿದ್ದೇನೆ. ಈಗ ಜಪಾನ್ ಸ್ಕೀಮ್ ಹೊಸದಾಗಿ ಬರುತ್ತಿದೆ. ಇನ್ನೊಂದು ಪ್ರಶ್ನೆ ಗಣಿಗಾರಿಕೆಗೆ ಸಂಬಂಧಿಸಿದಂತೆ ಕೇಳಿದ್ದಾರೆ. ಆ ಕುರಿತಂತೆ

ಪ್ರತ್ಯೇಕವಾಗಿ ಕೇಳಿದರೆ ಉತ್ತರಿಸುತ್ತೇನೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಪ್ರಶ್ನೆ ಸಂಖ್ಯೆ: ೨೬೬(೨೪೯೨)
(ಶ್ರೀ ವಿ.ಸೋಮಣ್ಣ ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ: ೨೬೭(೩೩೦೨)
(ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ ಗೈರು ಹಾಜರಾಗಿದ್ದರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೪೬೧

ಸದಸ್ಯರ ಹೆಸರು : ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜನಗರ)

ಉತ್ತರಿಸುವ ಸಚಿವರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ)

	ಪ್ರಶ್ನೆ	ಉತ್ತರ
ಅ.	ಚಾಮರಾಜನಗರ – ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಎಷ್ಟು ಎಕರೆ ಸಂಬಂಧಿಸಿದಂತೆ ಅರಣ್ಯ ಭೂಮಿ ಬೇಕಾಗುತ್ತದೆ.	ಚಾಮರಾಜನಗರ – ಮೆಟ್ಟುಪಾಳ್ಯಂ ರೈಲು ಮಾರ್ಗಕ್ಕೆ ಅರಣ್ಯ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ.	ಇದರಿಂದ ನಾಶವಾಗುವ ಮರಗಳ ಸಂಖ್ಯೆ ಎಷ್ಟು:	ಉದ್ಭವಿಸುವುದಿಲ್ಲ.
ಇ.	ಈ ಯೋಜನೆಗಳಿಂದ ಅರಣ್ಯದಲ್ಲಿರುವ ೨೫೦೦ ಆನೆಗಳು ರೈಲು ಹಳಿಗಳನ್ನು ದಾಟಲು ಸರ್ಕಾರವು ಯಾವ ರೀತಿಯ ಕ್ರಮ ಕೈಗೊಳ್ಳಲು ಯೋಚಿಸಿದೆ:	ಉದ್ಭವಿಸುವುದಿಲ್ಲ
ಈ.	ವನ್ಯ ಮೃಗಗಳು ರೈಲಿನ ಅಪಘಾತಕ್ಕೊಳಗಾಗದಂತೆ ಯಾವ ರೀತಿಯ ರಕ್ಷಣಾ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು:	ಉದ್ಭವಿಸುವುದಿಲ್ಲ.
ಉ.	ಈ ರೈಲು ಯೋಜನೆಯಿಂದ	